Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ 56/2020

ಪ್ರಾ.ಸಾ. 2 ಚಾ.ಸಾ. 2

| | | |
|---|---|---|
| ಹೆಸರು | : | ಶರಣಪ್ಪ |
| ತಂದೆಯ ಹೆಸರು | : | ಗುರಪ್ಪ ಯಂಕಂಚಿ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಸಹ-ಶಿಕ್ಷಕರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕನ್ಯಾಕೋಳೂರ |
| ವಾಸ | : | ಗೋಗಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 22-04-2024
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2012 ರಿಂದ ಇಲ್ಲಿಯವರೆಗೆ ಸಹ-ಶಿಕ್ಷಕರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕನ್ಯಾಕೋಳೂರ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನನಗೆ ಚಾಸಾ-1 ಪಿಎಸಐ ಸುರೇಶ ಬಾಬು, ಚಾಸಾ-3 ಎಮ್.ಡಿ. ಮೋಸಿನಸಾಬ, ಚಾಸಾ-4 ರಿಂದ 9 ರವರ ಪರಿಚಯ ಇದೆ. ದಿನಾಂಕಃ 21-01-2019 ರಂದು ಚಾಸಾ-1 ರವರು ಸುರೇಶ ಬಾಬು ರವರು ಸರಕಾರಿ ಪಂಚರಾಗಬೇಕು ಎಂದು ನಮ್ಮ ಶಾಲೆಗೆ ಬಂದು ನನಗೂ ಹಾಗೂ ಚಾಸಾ-3 ರವರಿಗೆ ಕರೆದರು. ನಾವು ಒಪ್ಪಿಕೊಂಡೆವು. ಮಧ್ಯಾಹ್ನ 3-00 ಗಂಟೆಗೆ ನಮ್ಮ ಶಾಲೆಯಿಂದ ಹೊರಟು ಹಾರಣಗೇರಾ ಹಳ್ಳದ ಸಮೀಪ ಒಂದು ಹೊಲದಲ್ಲಿ ಗಾಂಜಾಗಿಡ ಬೇಳದಿದ್ದಾರೆ ಅದನ್ನು ಜಪ್ತಿ ಮಾಡಲು ಬರಬೇಕೆಂದು ಹೇಳಿದರು. ಆಗ ನಾವೇಲ್ಲರೂ ಪೊಲೀಸ ಜೀಪನಲ್ಲಿ ಹಾರಣಗೇರಾದ ಸೀಮೆಯಲ್ಲಿ ಒಂದು ಹಳ್ಳದ ಬಳಿ ನಮ್ಮನ್ನು ಕರೆದುಕೊಂಡು ಹೋದರು. ಅಲ್ಲಿ ಗಾಂಜಾಗಿಡಗಳನ್ನು ತೋರಿಸಿ ಕಿತ್ತಿದ್ದರು ನಮ್ಮ ಜೊತೆ ತೂಕಮಾಡುವ ವ್ಯಕ್ತಿ ಸಹ ಬಂದಿದ್ದು ನಂತರ ಆ ಗಿಡಗಳನ್ನು ತೂಕ ಮಾಡಿದಾಗ ಒಂದು ಗಿಡ 2 ಕೆ.ಜಿ. 590 ಗ್ರಾಮ್ ತೂಕ ಆಯಿತು. ನಮ್ಮ ಶಾಲೆಯ ಮುಂದೆ ಇದ್ದ ಅಂಗಡಿಯವರು ತೂಕ ಮಾಡಿದರು. ದಾಳಿ ಮಾಡಿದಾಗ ಸಂಜೆ 4-45 ಗಂಟೆಯಾಗಿತ್ತು. ಆಪೈಕಿ ಪೊಲೀಸರು ಸ್ವಲ್ಪ ಗಾಂಜಾ ತೆಗೆದು ಬಟ್ಟೆಯಲ್ಲಿ ಸುತ್ತಿ ಲ್ಯಾಬಗೆ ಕಳುಹಿಸಬೇಕು ಎಂದು

ತೆಗೆದು ಸೀಲ್ ಮಾಡಿದರು. ಪಂಚನಾಮೆಯನ್ನು 4-45 ರಿಂದ 5-45 ಗಂಟೆಯವರೆಗೆ ಮಾಡಿದರು. ನಮ್ಮ ಜೊತೆ ಒಬ್ಬರು ಸಹಾಯಕ ವೈದ್ಯಾಧಿಕಾರಿಗಳು ಇದ್ದರು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮು.ಮಾ.1ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯಲ್ಲಿ ಸಾಕ್ಷಿ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.5(ಬಿ) ಎಂದು ಗುರುತಿಸಲಾಯಿತು. ನಿ.ಪಿ.6 ರಿಂದ 10 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪಂಚನಾಮೆಯನ್ನು ಓದಿ ಹೇಳಿ ಸಹಿ ಪಡೆದುಕೊಂಡಿರುತ್ತಾರೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಡಿ.ವಿ. ವಕೀಲರಿಂದ</u>

4. ನಾನು ಹಾರಣಗೇರಾ ಅಥವಾ ಹಾರಣಗೇರಾ ತಾಂಡಾದ ನಾಗರೀಕ ಅಲ್ಲ ಅಂದರೆ ಸರಿ. ಹಾರಣಗೇರಾದ ಪೂರ್ವ ದಿಕ್ಕಿಗೆ ಈ ಹೊಲ ಇದೆ. ಆ ಹೊಲದ ಪೂರ್ವದಿಕ್ಕಿಗೆ ಪಂಚನಾಮೆ ಮಾಡಿರುತ್ತಾರೆ. ಆ ಹೊಲದಲ್ಲಿ ಹತ್ತಿ ಬೆಳೆ ಇತ್ತು. ಹತ್ತಿ ಬೆಳೆಯ ಯಾವ ಬಾಗಗಳು ಬೆಳೆದಿತ್ತು ಎಂದು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ಗಾಂಗಾ ಗಿಡದ ಯಾವ ಬಾಗಗಳು ಬೆಳೆದಿದತ್ತು ಎಂದು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ನಾನು ಹತ್ತಿ ಮತ್ತು ಗಾಂಜಾಗಿಡಗಳನ್ನು ಗುರುತಿಸಲು ತೋಟಗಾರಿಕೆ ಇಲಾಖೆಯಿಂದ ಯಾವುದೇ ತರಬೇತಿ ಪಡೆದಿಲ್ಲ. ಗಾಂಜಾ ಗಿಡದ ಯಾವ ಬಾಗ ಸಾಂಪಲಗಾಗಿ ತೆಗೆದರು ಎಂದು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ದಾಳಿಗೆ ಹೋದವರು ಯಾರು ಪಂಚನಾಮೆಯಲ್ಲಿ ಸಹಿ ಮಾಡಿಲ್ಲ ಎಂದರೆ ಸಾಕ್ಷಿ ನಾನು ಸಹಿ ಮಾಡಿರುವದು ಗೊತ್ತು ಎಂದು ಹೇಳುತ್ತಾರೆ. ಅಲ್ಲಿ ಎಷ್ಟು ಗಿಡಗಳು ಇತ್ತು ಎಂದು ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸರಿ. ಸುತ್ತ ಮುತ್ತಲ ಹೊಲದಲ್ಲಿ ಯಾರು ಜನರು ಇರಲಿಲ್ಲ. ಸುತ್ತ ಮುತ್ತ ಯಾರ ಹೊಲಗಳು ಇತ್ತು ಎಂದು ಹೇಳಲು ಬರುವುದಿಲ್ಲ. ನಾನು ಹೊದಾಗ ಆ ಹೊಲದಲ್ಲಿ ನೀರು ಬಿಟ್ಟಿಲ್ಲ.

5. ನಾನು ಮತ್ತು ಇನ್ನೊಬ್ಬ ಪಂಚ ಸರಕಾರಿ ನೌಕರರು ಎಂದರೆ ಸರಿ. ನನ್ನನ್ನು ಮತ್ತು ಇನ್ನೊಬ್ಬ ಪಂಚನನ್ನು ಪೊಲೀಸರು ನೀವು ನಮ್ಮೊದಿಗೆ ಬರಬೇಕು ನಾವು ಹೇಳಿದಂತೆ ಕೇಳಬೇಕು ಎಂದು ಅಂಜಿಸಿ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಆರೋಪಿಗೆ ಓಡಾಡಲು ಆಗುದಿಲ್ಲ ಮತ್ತು ಆತ ಒಕ್ಕಲುತನ ಮಾಡುವ ಸ್ಥಿತಿಯಲ್ಲಿ ಇಲ್ಲ ಎಂದರೆ ಸರಿ.

6. ನನಗೆ ಚಾಸಾ-1 ಪಿಎಸಐ ಸುರೇಶ ಬಾಬು, ಚಾಸಾ-3 ಎಮ್.ಡಿ. ಮೋಸಿನಸಾಬ, ಚಾಸಾ-4 ರಿಂದ 9 ರವರ ಪರಿಚಯ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 21-01-2019 ರಂದು ಚಾಸಾ-1 ರವರು ಸುರೇಶ ಬಾಬು ರವರು ಸರಕಾರಿ ಪಂಚರಾಗಬೇಕು ಎಂದು ನಮ್ಮ ಶಾಲೆಗೆ ಬಂದು ನನಗೂ ಹಾಗೂ ಚಾಸಾ-3 ರವರಿಗೆ ಕರೆದರು. ನಾವು ಒಪ್ಪಿಕೊಂಡೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮಧ್ಯಾಹ್ನ 3-00 ಗಂಟೆಗೆ ನಮ್ಮ ಶಾಲೆಯಿಂದ ಹೊರಟು ಹಾರಣಗೇರಾ ಹಳ್ಳದ ಸಮೀಪ ಒಂದು ಹೊಲದಲ್ಲಿ ಗಾಂಜಾಗಿಡ ಬೆಳದಿದ್ದಾರೆ ಅದನ್ನು ಜಪ್ತಿ ಮಾಡಲು ಬರಬೇಕೆಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಾವೆಲ್ಲರೂ ಪೊಲೀಸ ಜೀಪನಲ್ಲಿ ಹಾರಣಗೇರಾದ ಸೀಮೆಯಲ್ಲಿ ಒಂದು ಹಳ್ಳದ ಬಳಿ ನಮ್ಮನ್ನು ಕರೆದುಕೊಂಡು ಹೋದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಗಾಂಜಾಗಿಡಗಳನ್ನು ತೋರಿಸಿ ಕಿತ್ತಿದಿದ್ದರು ನಮ್ಮ ಜೊತೆ ತೂಕಮಾಡುವ ವ್ಯಕ್ತಿ ಸಹ ಬಂದಿದ್ದು ನಂತರ ಆ ಗಿಡಗಳನ್ನು ತೂಕ ಮಾಡಿದಾಗ ಒಂದು ಗಿಡ 2 ಕೆ.ಜಿ. 590 ಗ್ರಾಮ್ ತೂಕ ಆಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಶಾಲೆಯ ಮುಂದೆ ಇದ್ದ ಅಂಗಡಿಯವರು ತೂಕ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾಳಿ ಮಾಡಿದಾಗ ಸಂಜೆ 4-45 ಗಂಟೆಯಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಪೈಕಿ ಪೊಲೀಸರು ಸ್ವಲ್ಪ ಗಾಂಜಾ ತೆಗೆದು ಬಟ್ಟೆಯಲ್ಲಿ ಸುತ್ತಿ ಲ್ಯಾಬಗೆ ಕಳುಹಿಸಬೇಕು ಎಂದು ತೆಗೆದು ಸೀಲ್ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು 4-45 ರಿಂದ 5-45 ಗಂಟೆಯವರೆಗೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಜೊತೆ ಒಬ್ಬರು ಸಹಾಯಕ ವೈದ್ಯಾಧಿಕಾರಿಗಳು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಟೊಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಯಾವ ಕಾರಣಕ್ಕೆ ತೆಗೆಯಲಾಯಿತು ಎಂದು ನನಗೆ ಗೊತ್ತಿಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.